ಶ್ರೀ ಎಂ. ರಘುಪತಿ.—ವಿರೋಧಪಕ್ಷದ ನಾಯಕರಿಗೆ ಅವಕಾಶ ಕೊಡಬೇಕು ಎಂದು ಆಷ್ಟೆ. ಇನ್ನೇನಿಲ್ಲ.

ಗಮನ ಸೆಳೆಯುವ ಸೂಚನೆ

ಬೆಂಗಳೂರಿನ ಎಂ.ಇ.ಐ. ಕಾರ್ಖಾನೆಗೆ ಸರ್ಕಾರಿ ನೆರವು ನೀಡದಿರುವುದು

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿರುವ ಸರ್ಕಾರಿ ಕಾರ್ಖಾನೆಯಾದ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್‌ಗೆ ಸರ್ಕಾರ ಯಾವ ರೀತಿಯ ನೆರವನ್ನು ನೀಡದೇ ಇರುವುದರಿಂದ ಉದ್ಭವಿಸಿದ ಮುಗ್ಗಟ್ಟಿನ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿರುವ ಎಂ.ಇ.ಐ. ಕಾರ್ಖಾನೆಗೆ ಸರ್ಕಾರ ನೆರವು ನೀಡದೇ ಇರುವುದರಿಂದ ಉದ್ಭವಿಸಿರುವ ಮುಗ್ಗಟ್ಟಿನ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಆ ಬಗ್ಗೆ ಈ ಹೇಳಿಕೆ ಕೊಡುತ್ತಿದ್ದೇನೆ.

೧೯೪೭ರಲ್ಲಿ ಖಾಸಗಿ ವಲಯದ ನಿಯಮಿತ ಕಂಪೆನಿಯಾಗಿ ಸ್ಥಾಪಿತವಾದ ಮೈಸೂರು ಎಲೆಕ್ಟ್ರಿಕಲ್ ಕಾರ್ಖಾನೆಯು ೧೯೭೭–೭೮ರಲ್ಲಿ ಆರ್ಥಿಕ ತೊಂದರೆಗಳಿಗೆ ಒಳಗಾಗಿ ಮುಚ್ಚಲ್ಪಟ್ಟಿತು ಹಾಗೂ ೧೯೭೮ರ ಮೇ ತಿಂಗಳಿಂದ ೧೦ ತಿಂಗಳವರೆಗೆ ಉತ್ಪಾದನೆಯು ಸ್ಥಗಿತಗೊಂಡಿತ್ತು. ಮೈಸೂರು ಎಲೆಕ್ಟ್ರಿಕಲ್ ಕಂಪೆನಿಯು ಸಾಮರ್ಥ್ಯದ ಬಗ್ಗೆ ಎನ್ ಜಿ.ಇ.ಎಫ್.ನ ಅಧಿಕಾರಿಗಳ ಗುಂಪೊಂದು ನಡೆಸಿದ ಅಧ್ಯಯನ ವರದಿಯನ್ನು ಹಾಗೂ ಬೇರೆ ಬೇರೆ ಹಂತಗಳಲ್ಲಿ ನಡೆಸಿದ ಪರ್ಯಾಲೋಚನೆಗಳನ್ನು ಪರಿಶೀಲಿಸಿದ ಬಳಿಕ ಕರ್ನಾಟಕ ಸರ್ಕಾರವು ಈ ಕಂಪೆನಿಯ ಷೇರುಗಳನ್ನು ಅಧ್ಯಾದೇಶ ಹೊರಡಿಸುವ ಮೂಲಕ ಸ್ವಾಧೀನ ಪಡಿಸಿಕೊಳ್ಳಲು ನಿರ್ಧರಿಸಿತು. ಆ ಪ್ರಕಾರ ಕಂಪೆನಿಯ ೫೨.೨೩% ಸಂದಾಯವಾದ ಮೂಲ ಬಂಡವಾಳವನ್ನು ಕರ್ನಾಟಕ ಸರ್ಕಾರವು ಸ್ವಾಧೀನಪಡಿಸಿಕೊಂಡು ಉಳಿದ ೪೭.೭೭%ನ್ನು ಎಲ್.ಐ.ಸಿ.ಯು. ಟಿ.ಐ.ಗೆ ಬಿಟ್ಟುಕೊಟ್ಟ ಕಂಪೆನಿಯ ನಿಯಂತ್ರಣವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ರಾಜ್ಯ ಸರ್ಕಾರವು ಸ್ವಾಧೀನಪಡಿಸಿಕೊಂಡ ನಂತರ ಈ ಕೆಳಗಿನ ನೆರವನ್ನು ನೀಡಿದೆ :

೧) ಕರ್ನಾಟಕ ರಿಲೀಫ್ ಅಂಡರ್ ಟೇಕಿಂಗ್ಸ್ (ಸ್ಪೆಷಲ್ ಪ್ರಾವಿಷನ್ಸ್) ಆಕ್ಟ್ ೧೯೭೭ರ ಅಡಿಯಲ್ಲಿ ಈ ಕಂಪೆನಿಯನ್ನು ''ಪರಿಹಾರ ಉದ್ದಿಮೆ'' ಯೆಂದು ಘೋಷಿಸಲಾಯಿತು,

೨) ಕೆನರಾ ಬ್ಯಾಂಕ್‌ನಿಂದ ಪಡೆದಿರುವ ೭೫ ಲಕ್ಷ ರೂ.ಗಳ ಸಾಲಕ್ಕೆ ಖಾತರಿ : ಯುನೈಟೆಡ್ ಕಮರ್ಶಿಯಲ್ ಬ್ಯಾಂಕ್‌ನಿಂದ ಪಡೆದ ಮಾರ್ಜಿನ್ ಹಣ ಕಂಪೆನಿಗೆ ಬಂಡವಾಳ ಮುಂಗಡ ಇವಕ್ಕೆ ಸರ್ಕಾರದ ಖಾತರಿ.

೩) ಹೊಸಪೇಟೆ ಘಟಕದ ಕಾರ್ಯಾಚರಣೆಯನ್ನು ಬಾಪಸಂತಪುರ ಘಟಕಕ್ಕೆ ವರ್ಗಾಯಿಸುವುದಕ್ಕಾಗಿ ೩೦ ಲಕ್ಷ ರೂ.ಗಳ ಬ್ರಿಡ್ಜ್ ಸಾಲ.

೪) ವ್ಯಾವಹಾರಿಕ ಬಂಡವಾಳಕ್ಕಾಗಿ ೨೦ ಲಕ್ಷ ರೂ.ಗಳ ಸಾಲ.

೫) ವಿಸ್ತರಿಸಿದ ಕಾಂಟ್ರಾಕ್ಟ್ ಯೋಜನೆಗಾಗಿ ತೆಗೆದುಕೊಂಡ ಉಪಕರಣಗಳಿಗಾಗಿ ೧೫ ಲಕ್ಷ ರೂ.ಗಳ ಸಾಲ.

೬) ೨೦ ಲಕ್ಷ ರೂ.ಗಳ ವ್ಯಾವಹಾರಿಕ ಬಂಡವಾಳ ಹಾಗೂ ೩೦ ಲಕ್ಷ ರೂ.ಗಳ ಬ್ರಿಡ್ಜ್ ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸಿದುದು.

೭) ೬೧ ಲಕ್ಷ ರೂ.ಗಳ ವಾಣಿಜ್ಯ ತೆರಿಗೆ ಬಾಕಿಯನ್ನು ಯೋಜನಾ ಸಾಲವನ್ನಾಗಿ ಪರಿವರ್ತಿಸಿದುದು.

೮) ೪ ಲಕ್ಷ ರೂ.ಗಳ ಖಾತರಿ ಕಮಿಷನ್‌ನ್ನು ಮನ್ನಾ ಮಾಡಿದುದು.

ಇವಿಷ್ಟೆ ಅಲ್ಲದೆ ೧೯೮೭–೮೮ರ ವಾರ್ಷಿಕ ಯೋಜನೆಯಲ್ಲಿ ೨೫ ಲಕ್ಷ ರೂ.ಗಳನ್ನು ಒದಗಿಸುವ ಪ್ರಶ್ನೆಯನ್ನು ಸರ್ಕಾರವು ಪರಿತೀಲಿಸುತ್ತಿದೆ. ಕಂಪೆನಿಯ ಸಾಮರ್ಥ್ಯವನ್ನು ಖಾತ್ರಿಪಡಿಸಲು ಮತ್ತು ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಐ.ಡಿ.ಬಿ.ಐ.ಯ ಸಮಾಲೋಚನೆಯೊಂದಿಗೆ ಕಂಪೆನಿಯು

ಪುನಸ್ಸಜ್ಜೀಕರಣದ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ. ನಿಜಸ್ಥಿತಿ ಹೀಗಿರುವಾಗ ಕಂಪೆನಿಗೆ ಸರ್ಕಾರವು ಯಾವುದೇ ರೀತಿಯ ನೆರವನ್ನು ನೀಡಿಲ್ಲವೆನ್ನುವುದು ಸಮಂಜಸವಲ್ಲ.

ಕಂಪೆನಿಯ ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ ಕಂಪೆನಿಯು ೧೯೫೫–೫೬ರಲ್ಲಿ ೭.೦೫ ಲಕ್ಷ ರೂ.ಗಳ ಲಾಭ ಗಳಿಸಿದೆ ಹಾಗೂ ಪುಸಕ್ತ ಸಾಲಿನಲ್ಲಿ ಇದರ ಕಾರ್ಯಾಚರಣೆ ಉತ್ತಮವಾಗಿದೆ. ಕಂಪೆನಿಯ ಆರ್ಥಿಕ ತೊಂದರೆ ಮುಖ್ಯ ಕಾರಣವೇನೆಂದರೆ, ಕಂಪೆನಿಯನ್ನು ಸರ್ಕಾರವು ವಹಿಸುವ ಮೊದಲು ಇದ್ದ ೫೬೦ಲಕ್ಷ ರೂ.ಗಳ ಹೊಣೆಗಾರಿಕೆಯು ಮೇಲಿನ ಬಡ್ಡಿಯು ಹೊಣೆಗಾರಿಕೆಯೇ ಆಗಿರುತ್ತದೆ.

ಈಗ ರೂಪಿಸುತ್ತಿರುವ ಪುನಸ್ಸಜ್ಜೀಕರಣ ಕಾರ್ಯಕ್ರಮಗಳಿಂದ ಕಂಪೆನಿಯು ಮುಂದಿನ ವರ್ಷಗಳಲ್ಲಿ ಉತ್ತಮ ಸ್ಥಿತಿಗೆ ಮರಳುವ ನಿರೀಕ್ಷೆ ಇವೆ.

† ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ಎರಡು ಮೂರು ಪ್ರಶ್ನೆಗಳನ್ನು ಮಾತ್ರ ನಾನು ಕೇಳುತ್ತೇನೆ. ಅದಕ್ಕೆ ತಾವು ಅವಕಾಶ ಕೊಡಬೇಕು. ಮೊದಲನೆಯದಾಗಿ ತಾವು ಇಲ್ಲಿ ವಿವರಗಳನ್ನು ಕೊಟ್ಟಿದ್ದೀರಿ. ಆ ವಿವರಗಳ ಪ್ರಕಾರವೇ ಒಂದು ಸ್ಪಷ್ಟವಾಗುತ್ತದೆ. ೨೦ ಲಕ್ಷ ರೂಪಾಯಿಗಳ ವ್ಯಾವಹಾರಿಕ ಬಂಡವಾಳ ಮತ್ತು ಇನ್ನೊಂದು ೫೦ ಲಕ್ಷ ರೂಪಾಯಿಗಳ ಬ್ರಿಡ್ಜ್ ಸಾಲವನ್ನು ಈ ಟಿ ಯಾಗಿ ಪರಿವರ್ತಿಸಿದ್ದೀರಿ. ಎಂ.ಇ.ಐ. ಕಾರ್ಖಾನೆಗೆ ಬೇಕಾಗಿರುವುದು ವರ್ಕಿಂಗ್ ಕ್ಯಾಪಿಟಲ್‌ಗೆ ಹಣ. ಪ್ರತ್ತೆ ದಿನನಿತ್ಯ ಕೆಲಸಕ್ಕೆ ಹಣ, ಹಿಂದೆ ಏನಾಗಿದೆಯೆಂದರೆ ನೀವೇ ಹೇಳಿರುವ ಹಾಗೆ ಸುಮಾರು ೫೦೦ ಲಕ್ಷ ರೂಪಾಯಿನಷ್ಟು ಬಡ್ಡಿ ಕೊಡಬೇಕಾಗಿರುವುದಿದೆ. ಮೋಸ ಮಾಡಿರುವುದು ಹಿಂದಿನವರು, ಬಾಸಗಿಯವರು. ಆವರು ಸರ್ಕಾರಕ್ಕೆ ಮೋಸ ಮಾಡಿದರು. ಈಗ ಪ್ರಶ್ನೆ ಏನೆಂದರೆ ಇದನ್ನು ಆಗಲೇ ಕಂಡುಹಿಡಿದಿದ್ದರೆ ಬೇರೆ ಪರಿಸ್ಥಿತಿ ಆಗುತ್ತಿತ್ತೋ ಏನೋ. ನೀವು ಕೊಟ್ಟಂತಹ ಹಣ ಆವರ ಕೈಗೆ ಸೇರಲೇ ಇಲ್ಲ. ಓಕಳೀಪುರದ ಪೆಪ್ಪಿರ ಪಲ್ಪಿಂಗ್ ಕಟ್ಟುವುದಕ್ಕೆ ೫೦ ಲಕ್ಷ ರೂಪಾಯಿಗಳನ್ನು ಸಾಲವಾಗಿ ಏನು ಕೊಟ್ಟಿದ್ದೀರಿ, ಅದಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಇದನ್ನು ಲೋನ್ ಎಂದು ಮೊದಲು ಕರೆದಿದ್ದೀರಿ. ನಂತರ ಈಕ್ವಿಟಿಯಾಗಿ ಪರಿವರ್ತನೆ ಮಾಡಿದ್ದೀರಿ. ಆವರಿಗೆ ಹಣ ಮಾತ್ರ ಸಿಕ್ಕಲೇ ಇಲ್ಲ. ನಂತರ ಒನೇ ಬಟಿಂನಲ್ಲಿ ಹೇಳಿರುವಂತೆ ಮಾರಾಟ ತೆರಿಗೆ ೬೧ ಲಕ್ಷ ರೂಪಾಯಿಗಳು ಏನು ಬಾಕಿ ಇದೆ, ಅದನ್ನು ಮನ್ನಾ ಮಾಡಲಿಲ್ಲ. ಅದನ್ನೂ ಕೂಡ ಸಾಲವನ್ನಾಗಿ ಪರಿವರ್ತನೆ ಮಾಡಿದ್ದೀರಿ. ಆವರು ಮತ್ತೆ ಆವರ ಮೇಲೆ ಬಡ್ಡಿಯನ್ನು ಕೊಡಬೇಕಾಗಿದೆ. ಬಡ್ಡಿ ಕೂಡ ಎಷ್ಟು ಎಂದರೆ ರೇಕಡ ೬ರಷ್ಟು ಬೇರೆಯವರು ಹಾಕುತ್ತಿದ್ದಾರೆ, ನೀವು ೧೦ ಪರ್ಸೆಂಟ್ ಬಡ್ಡಿಯನ್ನು ಹಾಕಿದ್ದೀರಿ. ಆದು ಒಂದು ಬರ್ಡನ್ ಆಗಿದೆ ಆವರಿಗೆ. ಈ ರೀತಿಯಾಗಿ ಸಾಲ ಸಾಲ ಎಂದು ಹೇಳಿ ದಿನ ನಿತ್ಯದ ಕೆಲಸಗಳಿಗಾಗಿಯೂ ಆವರಿಗೆ ಕಳೆದ ೧೦ ವರ್ಷಗಳಿಂದ ಏನೂ ಸಿಕ್ಕಲಿಲ್ಲ. ನಿಜವಾಗಿಯೂ ಆವರಿಗೆ ಸಿಕ್ಕಿರುವುದು ೧೫ ಲಕ್ಷ ರೂಪಾಯಿಗಳು ಮಾತ್ರ. ಆದೂ ಕೂಡ ಎಇಜಿ–ಕಾಂಟ್ರಾಕ್ಟರ್ಸ್ ಪ್ರಾಜೆಕ್ಟ್‌ಗಾಗಿ ಕೊಟ್ಟಿದ್ದೀರಿ. ಬೇರೆ ಯಾವುದೂ ಸಿಕ್ಕಿಲ್ಲ. ಕಮೀಷನ್ ೪ ಲಕ್ಷ ಒಟ್ಟು ೧೯ ಲಕ್ಷ ಆವರಿಗೆ ಸಿಕ್ಕಿದೆ. ಎಷ್ಟೋ ವರ್ಷಗಳ ಕಾಲದಿಂದ ಆ ಕಾರ್ಖಾನೆಯನ್ನು ನಡೆಸಿಕೊಂಡು ಬಂದಿದ್ದಾರೆ. ಲಾಭ ವಾಗುತ್ತಿದೆ. ಒಳ್ಳೆಯ ಉತ್ತಮ ಕಾರ್ಖಾನೆಯಾಗುವ ಪರಿಸ್ಥಿತಿ ಇದೆ. ಇದೊಂದು ಸರ್ಕಾರದ ಕಂಪನಿಯಾಗಿರುವುದರಿಂದ ಇದು ಸರಿಯಾಗಿ ಮುಂದುವರಿಯುವುದಕ್ಕೆ ಸಾಕಾದಷ್ಟು ಅವಕಾಶಗಳು ಇವೆ. ಅಲ್ಲಿ ೧೩೦೦ ಜನಗಳಿಗೆ ಕೆಲಸ ಸಿಕ್ಕುವ ವ್ಯವಸ್ಥೆ ಇರುವುದರಿಂದ ಪ್ರಾಕೇಜ್ ಪ್ರಪೋಸಲ್ಲಾಗಿದೆ. ಪರಿಶೀಲನೆ ಮಾಡಿ ಇದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿರಾ ? ಪ್ಯಾಕೇಜ್ ಪ್ರಪೋಸಲ್ ಮುಖ್ಯವಾಗಿ ಗೊತ್ತಿದ್ದ ಹಾಗೆ ಐ.ಡಿ.ಬಿ.ಐ.ನವರು ಇದನ್ನು ಮಾಡ್ರನೈಜ್ ಮಾಡುವುದಕ್ಕಾಗಿಯೇ ೧೫೦ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದಾರೆ. ಇದಕ್ಕೆ ಸರ್ಕಾರದವರು ಹಾಗೂ ಬ್ಯಾಂಕಿನವರು ಅಗ್ರಿಮೆಂಟ್‌ಗೆ ಬರಬೇಕೆಂದು ಹೇಳುತ್ತಿದ್ದಾರೆ. ಸರ್ಕಾರದವರು ಮತ್ತು ಬ್ಯಾಂಕಿನವರು ಆ ಅಗ್ರಿಮೆಂಟನ್ನು ಗಮನಿಸಿ ಆದರ ಆಧಾರದ ಮೇಲೆ ತೀರ್ಮಾನಕ್ಕೆ ಬರುತ್ತೀರಾ ? ಆದರೆ ಇದಕ್ಕೆ ಯಾವ ರೀತಿಯಾಗಿ ಹಣವನ್ನು ಪಡೆಯಬಹುದೆಂಬುದಕ್ಕೆ ಕೆಲವು ಸೂಚನೆಯನ್ನು ಕೊಟ್ಟಿದ್ದೀರಿ. ಕಮರ್ಷಿಯಲ್ ಕಾಂಪ್ಲೆಕ್ಸ್ ಮಾಡಬಹುದು.

ಅಧ್ಯಕ್ಷರು.—ತಾವು ಕೂಡ ಇಷ್ಟೊಂದು ಸವಿಸ್ತಾರವಾಗಿ ವ್ಯಾಖ್ಯಾನ ಮಾಡಿದರೆ ಹೇಗೆ ? ವಿವರಣೆಯನ್ನು ಮಾತ್ರ ಕೇಳಿ.

---

† ಈ ಚಿಪ್ಪೆ ಮಾನ್ಯ ಸದಸ್ಯರು ಟಿಪ್ಪಣಿ ಆಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.